3. ವಿಷಯ : ರಾಜ್ಯದಲ್ಲಿ ಬೆಳೆದಿರುವ ಅರಿಶಿನ ಬೆಳೆಗೆ ಬೆಂಬಲ ಬೆಲೆಯನ್ನು ಘೋಷಿಸುವ ಬಗ್ಗೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) :– ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಚಾಮರಾಜನಗರ, ಮೈಸೂರು ಭಾಗಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಅರಿಶಿನ ಬೆಳೆಯನ್ನು ಬಹಳ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಸುಮಾರು 25 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈ ಅರಿಶಿನ ಬೆಳೆಯನ್ನು ವಾಣಿಜ್ಯ ಬೆಳೆಯನ್ನಾಗಿ ನಮ್ಮ ರೈತರು ಬೆಳೆಯುವಂಥ ಪರಿಪಾಠವಿದೆ. ಹೆಚ್ಚಿನ ವೆಚ್ಚವನ್ನು ಮಾಡಿ ರೈತರು ಈ ಬೆಳೆಯನ್ನು ಬೆಳೆಯುತ್ತಿದ್ದಾರೆ. ಕಳೆದ ವರ್ಷ ಈ ಬೆಳೆಗೆ ಒಳ್ಳೆಯ ಮಾರುಕಟ್ಟೆ ಬಂದು, ಒಂದು ಕ್ವಿಂಟಾಲ್‌ಗೆ ಸುಮಾರು 16–17 ಸಾವಿರ ರೂಪಾಯಿಗಳವರೆಗೆ ಬೆಲೆ ಬಂದುದರಿಂದ ಈ ಸಾಲಿನಲ್ಲಿ ಬಹಳ ರೈತರು ಸುಮಾರು 32 ರಿಂದ 35 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈ ಬೆಳೆಯನ್ನು ವಿಸ್ತರಣೆ ಮಾಡಿಕೊಂಡಿದ್ದಾರೆ. ಕಳೆದ ಸಲದ ಬೆಲೆಯನ್ನು ನೋಡಿ, ಈ ಸಲವೂ ಅದೇ ರೀತಿ ಬೆಲೆ ಸಿಗಬಹುದು ಎಂದು ಈ ಬೆಳೆಯನ್ನು ಬೆಳೆದಿದ್ದಾರೆ. ಇದು ಒಂದು ವರ್ಷದ ಬೆಳೆ. ಪ್ರಾರಂಭದಲ್ಲಿ ಮಣ್ಣನ್ನು ಹದ ಮಾಡುವುದರಿಂದ ಹಿಡಿದು ಬೆಳೆ ತೆಗೆಯುವವರೆಗೆ ನಿರಂತರವಾಗಿ ರೈತರು ತಮ್ಮನ್ನು ಇದರಲ್ಲಿ ತೊಡಗಿಸಿಕೊಳ್ಳಬೇಕು. ಇದು ಹೆಚ್ಚು labour and manure ಅನ್ನು ಬಳಕೆ ಮಾಡುವಂಥ ಬೆಳೆಯಾಗಿದೆ. ನಮ್ಮ ಕರ್ನಾಟಕದಲ್ಲಿ ಇದಕ್ಕೆ ಮಾರುಕಟ್ಟೆ ಇಲ್ಲ. ತಮಿಳುನಾಡಿನ ಈರೋಡಿನವರು ಬಂದು ಇದನ್ನು ಖರೀದಿ ಮಾಡಿದರೆ ಮಾತ್ರ ಇದು ಮಾರಾಟವಾಗುತ್ತದೆ. ಇದಕ್ಕೆ ಸ್ಥಳೀಯ ಮಾರುಕಟ್ಟೆ ಇಲ್ಲದೇ ಇರುವುದರಿಂದ ಇವತ್ತು ಇದನ್ನು ಬೆಳೆದಂಥ ರೈತರು ಕಂಗಾಲಾಗಿದ್ದಾರೆ. ಇದರ ಇವತ್ತಿನ ಮಾರುಕಟ್ಟೆ ಬೆಲೆ 2600 ರೂಪಾಯಿಗಳಾಗಿದೆ. ಒಂದು ಕ್ವಿಂಟಾಲ್‌ಗೆ 2600 ರೂಪಾಯಿಗೆ ತಮಿಳುನಾಡಿನಿಂದ ಬಂದು ಚಾಮರಾಜನಗರದಲ್ಲಿ ಖರೀದಿ ಮಾಡುತ್ತಿದ್ದಾರೆ. 17 ಸಾವಿರ ಇದ್ದದ್ದು 2600 ರೂ. ಗೆ ಇಳಿದಿರುವ ಸಂದರ್ಭದಲ್ಲಿ market intervention ಆಗಿ ಸರ್ಕಾರ ಖರೀದಿ ಮಾಡಬೇಕೆಂದು ನಮ್ಮ ಭಾಗದಲ್ಲಿ ರೈತ ಸಂಘಟನೆಗಳು, ನಾವು ಮತ್ತು ರೈತರು ಎಲ್ಲರೂ ಕೂಡ ಜಿಲ್ಲಾಧಿಕಾರಿಗಳ ಮುಂದೆ ಪ್ರತಿಭಟನೆ ಮಾಡಿದ್ದೇವೆ, ಅವರ ಕಛೇರಿ ಮುಂದೆ ರಸ್ತೆ ತಡೆಗಳಾಗಿವೆ.

ಅಧ್ಯಕ್ಷರು :- ಶೂನ್ಯ ವೇಳೆಯಲ್ಲಿ ಈ ರೀತಿ ಸವಿಸ್ತಾರವಾಗಿ ಮಾತನಾಡುವುದಕ್ಕೆ ಅವಕಾಶವಿಲ್ಲ. ಕೇವಲ ಪ್ರಸ್ತಾಪ ಮಾಡಲಿಕ್ಕೆ ಮಾತ್ರ ಅವಕಾಶವಿದೆ. ಹೀಗೆ ಎಲ್ಲವನ್ನೂ ಹೇಳುತ್ತಾ ಇದ್ದರೆ ಹೇಗೆ? No. ಹೀಗಾದರೆ ನಾನು ಅವಕಾಶ ಕೊಡುವುದೇ ಇಲ್ಲ. ಈ ಸಮಯದಲ್ಲಿ ಪ್ರಸ್ತಾಪಕ್ಕೆ ಮಾತ್ರ ಅವಕಾಶ. ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಹೇಳಿದರೆ ನೀವು ವಿಸ್ತಾರವಾಗಿ ಹೇಳುವುದು ಸರಿಯಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :- ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರ MSP ಯನ್ನು ನಿಗದಿಪಡಿಸುತ್ತಾರೆ. ಅವರು ಮಾಡಿರುವುದರಿಂದ ನಾವು ಖರೀದಿ ಮಾಡುವುದಕ್ಕೆ ಬರುವುದಿಲ್ಲ. ಆವರ್ತ ನಿಧಿಯನ್ನು ಕೇಂದ್ರ ಸರ್ಕಾರ ಕೊಡಬೇಕು, ಅವರು ಖರೀದಿ ಮಾಡಬೇಕೆಂದು ಪ್ರತಿಯೊಂದಕ್ಕೂ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಹೇಳುತ್ತಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಒಂದು ಆದೇಶ ಮಾಡಿದೆ. ಮಾನ್ಯ ಕೃಷಿ ಸಚಿವರು ಒಂದು ತಿಂಗಳ ಹಿಂದೆಯೇ ಒಂದು ಆದೇಶ ಮಾಡಿದ್ದಾರೆ. ಅದರಲ್ಲಿ ಏನು ಪೇಳಿದ್ದಾರೆಂದರೆ, ಫೆಬ್ರವರಿ 10 ರಿಂದ ಮಾರ್ಚ್ 10 ರವರೆಗೆ 12400 ಮೆಟ್ರಿಕ್ ಟನ್ ಖರೀದಿ ಮಾಡುವುದಕ್ಕೆ permission ಕೊಟ್ಟು 4092 ರೂಪಾಯಿಗಳ ರೇಟ್ ಅನ್ನೂ ಸಹ fix ಮಾಡಿದ್ದಾರೆ. ಈಗಾಗಲೇ ಅವರು ಖರೀದಿ ಮಾಡುವ ಸಮಯ ಮುಗಿದು ಹೋಗಿದೆ. ಕೇಂದ್ರ ಸರ್ಕಾರದ ಪತ್ರ ನನ್ನ ಬಳಿ ಇದೆ. ಕೇಂದ್ರ ಸರ್ಕಾರ ನಿಗದಿಪಡಿಸಿರುವ ರೀತಿಯಲ್ಲಿ ಎಷ್ಟು ಹೊತ್ತಿಗೆ 16000 ಕ್ವಿಂಟಾಲ್ ಖರೀದಿಯಾಗಬೇಕಾಗಿತ್ತು. ಆದರೆ, ಇವತ್ತಿನವರೆಗೆ ಒಂದೂ ಸಹ ಖರೀದಿ ಕೇಂದ್ರವನ್ನು ರಾಜ್ಯ ಸರ್ಕಾರದ ವತಿಯಿಂದ ಅಥವಾ APMC ವತಿಯಿಂದ ತೆರೆದಿಲ್ಲ. ಡಿಸೆಂಬರ್ ತಿಂಗಳ ವೇಳೆಗೆ ಈ ಬೆಳೆ ರೈತರ ಕೈಗೆ ಬರುತ್ತದೆ. ಅದರಿಂದಾಗಿ ರೈತರು ಸಾಲ ಮಾಡಿಕೊಂಡು, ಯಾರೂ ಸಹ ವ್ಯಾಪಾರಸ್ಥರು ಖರೀದಿ ಮಾಡಲು ಬಾರದೆ, ಇವತ್ತು ಬಡ್ಡಿಗೆ ಹಣ ಕೊಟ್ಟವರು ರೈತರ ಮನೆ ಬಾಗಿಲಿಗೆ ಬರುತ್ತಿದ್ದಾರೆ. ಮತ್ತೊಂದು ಕಡೆ, ರೈತರು ತಮ್ಮ ವರ್ಷದ ಶ್ರಮವನ್ನೆಲ್ಲ ಈ ಫಸಲಿಗೆ ಹಾಕಿ ಇವತ್ತು ಕಂಗಾಲಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಹಂತಕ್ಕೆ ತಲುಪಿದ್ದಾರೆ.

ಅಧ್ಯಕ್ಷರು :- ಉತ್ತರ ಹೇಳುವುದಕ್ಕೆ ಬಿಡಿ. ಶೂನ್ಯವೇಳೆಯಲ್ಲಿ ಇಷ್ಟೊಂದು ವಿಸ್ತಾರವಾಗಿ ಹೇಳಲು ಅವಕಾಶವಿಲ್ಲ. ನಾನು ಅವಕಾಶ ಕೊಟ್ಟರೆ ನೀವು ಎಲ್ಲವನ್ನೂ ಹೇಳುತ್ತಿದ್ದೀರಿ. No. No.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :– Cabinet sub-committeeಗೆ ಇದಕ್ಕೆ ಸಂಬಂಧಿಸಿದ ಫೈಲ್ ರೆಫರ್ ಆಗಿ 20 ದಿನಗಳಾಗಿವೆ. ಇವತ್ತಿನವರೆಗೆ cabinet sub-committee ಸೇರಿ ಖರೀದಿ ಕೇಂದ್ರ ತೆರೆಯುವುದಕ್ಕೆ ಕ್ರಮ ತೆಗೆದುಕೊಂಡಿಲ್ಲ. ಕೂಡಲೇ ಮಾನ್ಯ ಮುಖ್ಯಮಂತ್ರಿಯವರು ಈ ವಿಷಯದ ಗಂಭೀರತೆ ಮತ್ತು ರೈತರ ಸಮಸ್ಯೆಯನ್ನು ಅರಿತುಕೊಳ್ಳಬೇಕು. ಆದರೆ, ಈ 4000 ರೂ. ಗಳನ್ನು ಸಹ ಕೇಂದ್ರ ಸರ್ಕಾರ ರಾಷ್ಟ್ರ ವ್ಯಾಪ್ತಿಯನ್ನು ಗಮನಿಸಿ ನಿಗದಿಪಡಿಸಿದೆ. ಇವತ್ತಿನ ರೈತರ ಖರ್ಚು ವೆಚ್ಚಗಳನ್ನು ಗಮನಿಸಿದಾಗ ಈ 4000 ರೂಪಾಯಿಗಳೂ ಸಹ ಬಹಳ ಕಡಿಮೆಯೇ ಆಗಿದೆ. ರಾಜ್ಯ ಸರ್ಕಾರವೂ ಸಹ ಕನಿಷ್ಟ 2000 ರೂಪಾಯಿಗಳನ್ನಾದರೂ ತಮ್ಮ ಆವರ್ತ ನಿಧಿಯಿಂದ ಬೆಲೆಯನ್ನು ನಿಗದಿಪಡಿಸಿ, 6000–7000 ರೂಪಾಯಿಗಳ ಬೆಲೆಯಲ್ಲಿ ರೈತರು ಬೆಳೆದ ಅರಿಶಿನವನ್ನು ಖರೀದಿಸುವುದಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :– ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಮಾನ್ಯ ಮಹದೇವ ಪ್ರಸಾದ್‌ರವರು ಈಗ ಪ್ರಸ್ತಾಪ ಮಾಡಿರುವ ವಿಷಯವನ್ನು ಕಳೆದ ಅಧಿವೇಶನದಲ್ಲೂ ಕೂಡ ಪ್ರಸ್ತಾಪ ಮಾಡಿದ್ದರು. ನಮ್ಮ ಚಾಮರಾಜನಗರ, ಮೈಸೂರು ಜಿಲ್ಲೆಯಲ್ಲಿ ಅರಿಶಿನ ಬೆಳೆಗಾರರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಕಳೆದ ವರ್ಷ ಅರಿಶಿನ ಕ್ವಿಂಟಾಲ್‌ಗೆ 20000 ಸಾವಿರ ರೂಪಾಯಿಗಳಷ್ಟಿತ್ತು. ಈಗ ಅದು 2–3 ಸಾವಿರ ರೂಪಾಯಿಗಳಿಗೆ ಇಳಿದಿದೆ. ನಾವು ಏನು ಮಾಡಬೇಕು ಹೇಳಿ? ನಾವು ಕಾಫಿ ಬೆಳೆಯುವವರಲ್ಲ. ನಾವು ಕಷ್ಟದಲ್ಲಿದ್ದೇವೆ.

ಅಧ್ಯಕ್ಷರು :– ನಾವು ಕಾಫಿ ಬೆಳೆದರೂ ಕೇವಲ ಕಾಫಿ ಮಾತ್ರ ಬೆಳೆಯುತ್ತೇವೆ. ಆದರೆ ನಿಮ್ಮಲ್ಲಿ ಈ ವರ್ಷ ಶುಂಠಿ ಬೆಳೆದರೆ ಮುಂದಿನ ವರ್ಷ ಅರಿಶಿನ ಬೆಳೆಯುತ್ತೀರಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :– ಕಾಫಿ ಎಲ್ಲಿ ಬೆಳೆಯುತ್ತಾರೋ ಅಲ್ಲಿಯೇ ಹೊಸ ಹೊಸ ಕಾರು ಓಡಾಡುವುದು.

ಅಧ್ಯಕ್ಷರು :– ಅಲ್ಲ ನೀವು ಈ ಬೆಳೆಗಳ ಬದಲಾವಣೆ ಮಾಡಬೇಡಿ. ಯಾವುದಾದರೊಂದನ್ನೇ ಬೆಳೆಯಿರಿ.

ಶ್ರೀ ಸಿದ್ದರಾಮಯ್ಯ :– ರಸ್ತೆಗೆ ಯಾವುದೋ ಹೊಸ ಕಾರ್ ಬರುತ್ತದೆಯೋ ಅದು ಮೊದಲು ಅಲ್ಲಿರುತ್ತದೆ. ಆ ತರಹ ನಮ್ಮ ಕಡೆ ಇಲ್ಲ. ಕೇಂದ್ರ ಸರ್ಕಾರದವರು 4092 ರೂಪಾಯಿಗಳಿಗೆ ಒಂದು ಕ್ವಿಂ ್

ಅರಿಶಿನವನ್ನು ಖರೀದಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಹೇಳಿದ್ದಾರೆ. ನೀವು ತೆಗೆದುಕೊಂಡಿಲ್ಲ. ಕೃಷಿ ಇಲಾಖೆಯವರು ಅದನ್ನು ಮುಚ್ಚಿಹಾಕಿದ್ದಾರೇನೋ ಅಥವಾ ಆ ಮಾಹಿತಿ ಬಂದಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಖರೀದಿ ಮಾಡಲಿಲ್ಲ. ಖರೀದಿ ಮಾಡುವ ಸಮಯ ಕೂಡ ಮುಗಿದು ಹೋಗಿದೆ. ಈಗ Market Intervention Scheme ನಲ್ಲಿ ಅವರಿಗೆ ಕ್ವಿಂಟಾಲ್ ಒಂದಕ್ಕೆ 2–3 ಸಾವಿರ ರೂಪಾಯಿಗಳನ್ನು ರಾಜ್ಯ ಸರ್ಕಾರದವರು ಕೊಡಬೇಕು. ಎಷ್ಟು ಕ್ವಿಂಟಾಲ್ ಅರಿಶಿನ ಇದೆಯೋ ಅಷ್ಟನ್ನು ನೀವು ಖರೀದಿ ಮಾಡಿದರೆ ರೈತರನ್ನು ಬದುಕಿಸಿದ ಹಾಗಾಗುತ್ತದೆ. ಇಲ್ಲದಿದ್ದರೆ ರೈತರು ಸಾಲ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ಹೋಗುತ್ತಾರೆ. 18–20 ಸಾವಿರ ರೂಪಾಯಿ ಇದ್ದದ್ದು ಈಗ ಅದು 2 ಸಾವಿರ ರೂಪಾಯಿಗಳಿಗೆ ಇಳಿದಿದೆ. ಮಾನ್ಯ ಮುಖ್ಯಮಂತ್ರಿಯವರು ಮಾನವೀಯತೆಯ ದೃಷ್ಟಿಯಿಂದ ಮತ್ತು ರೈತರಿಗೆ ಸಹಾಯ ಮಾಡಬೇಕೆನ್ನುವ ಕಾರಣದಿಂದ ದಯವಿಟ್ಟು ನೀವು ಅವರ ಸಹಾಯಕ್ಕೆ ಬರಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಅರಿಶಿನದ ಬೆಲೆ ದಿಢೀರ್ ಕುಸಿತಗೊಂಡಿರುವುದು ಅರಿಶಿನ ಬೆಳೆಗಾರರನ್ನು ಸ್ವಲ್ಪ ಕಂಗಾಲಿಗೆ ಈಡು ಮಾಡಿದೆ. ಈಗಾಗಲೇ ನಮ್ಮ ಕಡೆಯಿಂದ ತಾವೆಲ್ಲ ಗಮನಿಸಿದ ಹಾಗೆ ಭತ್ತಕ್ಕೆ ವಿಶೇಷ ಪ್ರೋತ್ಸಾಹ ಧನವೆಂದು 2500 ರೂಪಾಯಿ ಕೊಟ್ಟು ಖರೀದಿ ಮಾಡಿರುವಂಥದ್ದು, ಈರುಳ್ಳಿ ಬೆಲೆ ಕುಸಿತವಾದಾಗ ಬೆಂಬಲ ಬೆಲೆ ಕೊಟ್ಟು ಖರೀದಿ ಮಾಡಿರುವಂಥದ್ದು, ರೇಷ್ಮೆ ಗೂಡಿನ ಬೆಲೆ ಕುಸಿತವಾದಾಗ ಕೆ.ಜಿ.ಗೆ 30 ರೂಪಾಯಿ ಕೊಟ್ಟು ಖರೀದಿ ಮಾಡಿರುವುದು ಇದೆಲ್ಲವನ್ನೂ ನಮ್ಮ ಸರ್ಕಾರ ಮಾಡಿದೆ. ಮತ್ತೆ ನಾವು ತೊಗರಿ ಬೇಳೆ ಖರೀದಿ ಮಾಡುವುದಕ್ಕೆ ನಿನ್ನೆ ಯಾದಗಿರಿಗೆ, ಬೀದರ್‌ಗೆ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಖರೀದಿ ಮಾಡುವ ವ್ಯವಸ್ಥೆ ಮಾಡಿದ್ದೇವೆ. ಈ ರೀತಿ ರೈತರಿಗೆ ಯಾವತ್ತು ಏನು ತೊಂದರೆಯಾದರೂ ಕೂಡ ಅದರಲ್ಲಿ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದ್ದು ಈ ಸರ್ಕಾರವೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಈಗಾಗಲೇ ನಾವು ಇದನ್ನು ಖರೀದಿ ಮಾಡಬೇಕೆಂದು ಆದೇಶ ಮಾಡಿದ್ದೇವೆ. 4092 ರೂಪಾಯಿಗಳಿಗೆ ಖರೀದಿ ಮಾಡಬೇಕೆಂದು ಈಗಾಗಲೇ ಹೇಳಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಕೇಂದ್ರ ಸರ್ಕಾರದವರು support price 4092 ರೂಪಾಯಿ ಎಂದು ಹೇಳಿದ್ದಾರೆ. ನೀವು ಒಂದು ಕ್ವಿಂಟಾಲ್‌ಗೆ 3 ಸಾವಿರ ರೂಪಾಯಿಗಳನ್ನು ಸೇರಿಸಿ ಕೊಟ್ಟುಬಿಡಿ.

ಶ್ರೀ ಡಿ.ವಿ. ಸದಾನಂದಗೌಡ :– ನಾವು ಹೇಳುವುದೇನೆಂದರೆ, ಈಗಾಗಲೇ ಕೇಂದ್ರ ಸರ್ಕಾರ 4092 ರೂಪಾಯಿ ಏನು ನಿಗದಿ ಪಡಿಸಿದೆ ಅದರಂತೆ ಖರೀದಿಸುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ನಾವು ಜಿಲ್ಲಾಧಿಕಾರಿಗಳಿಗೆ ಮಾರ್ಚ್ 24ನೇ ತಾರೀಖಿನಲ್ಲಿ ಬಿಡುಗಡೆ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ :– ರಾಜ್ಯ ಸರ್ಕಾರದಿಂದ ಎಷ್ಟು ಹಣ ಕೊಡುತ್ತೀರಿ ಎನ್ನುವುದನ್ನು ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ :– ಅದು ಕೊಡುತ್ತೇವೆ. ನಮ್ಮ ಕೃಷಿ ಮಂತ್ರಿಯವರು ಇವತ್ತು ಲಭ್ಯವಿಲ್ಲ. ಕೃಷಿ ಮಂತ್ರಿಯವರು ನಾಳೆ ಬಂದ ತಕ್ಷಣ ಉಳಿದ ಏನು ಹೆಚ್ಚಿನ ಮಾಹಿತಿಗಳು ಇವೆ ಅದನ್ನು ಸದನಕ್ಕೆ ಕೊಟ್ಟು ಮಾಡುವಂತಹ ಕೆಲಸ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ :– ದಯಮಾಡಿ, ರೈತರು ಸ್ವಲ್ಪ ಸಮಾಧಾನವಾಗಿ ಬದುಕಲಿ.

ಶ್ರೀ ಡಿ.ವಿ. ಸದಾನಂದಗೌಡ :– ಖಂಡಿತ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ :– 4092 ರೂಪಾಯಿಗಳನ್ನು ಕೇಂದ್ರ ಸರ್ಕಾರ ನಿಗದಿ ಮಾಡಿದೆ. ಅದರ ಜೊತೆಗೆ, ರಾಜ್ಯ ಸರ್ಕಾರದವರು 3 ಸಾವಿರ ರೂಪಾಯಿಗಳನ್ನು ಸೇರಿಸಿಕೊಡಿ.

ಶ್ರೀ ಡಿ.ವಿ. ಸದಾನಂದಗೌಡ :– ಪ್ರತಿಪಕ್ಷದ ನಾಯಕರು ಈಗ ಏನು ಪ್ರಸ್ತಾಪ ಮಾಡಿದ್ದಾರೆ, ನಮ್ಮ ಕೃಷಿ ಮಂತ್ರಿಯವರು ಮೊನ್ನೆಯಿಂದ ಚರ್ಚೆ ಮಾಡಿ ಕೆಲಸ ಮಾಡುತ್ತಿದ್ದಾರೆ. ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅವರು ಬಂದ ತಕ್ಷಣ ಸದನದಲ್ಲಿ ಉತ್ತರ ಕೊಡಿಸುವಂಥದ್ದು ಮತ್ತು ಖರೀದಿ ಮಾಡಿಸುವ ಜವಾಬ್ದಾರಿ ಸರ್ಕಾರಕ್ಕಿದೆ, ಅದನ್ನು ಮಾಡಿಸುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ :– ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, ಕೇವಲ ಮೈಸೂರು ಜಿಲ್ಲೆಯಲ್ಲ, ಹಾಸನ ಜಿಲ್ಲೆಯಲ್ಲೂ ಕೂಡ ಅರಿಶಿನ ಬೆಳೆದಿದ್ದಾರೆ. ದಯಮಾಡಿ, ಹಾಸನ ಜಿಲ್ಲೆಯಲ್ಲಿ ಬೆಳೆದ ಬೆಳೆಗಾರರಿಗೂ ಸಹಾಯ ಮಾಡಿ.

4. ವಿಷಯ :– **ಕೆ.ಇ.ಬಿ.ಯವರು ವಿದ್ಯುತ್ ಕಂಬ ಹಾಕುವುದು, ಲೈನ್ ಎಳೆಯುವುದರ ಬಗ್ಗೆ**

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ :– ಮಾನ್ಯ ಅಧ್ಯಕ್ಷರೆ, ಇದುವರೆಗೂ ಕೊರೆದ ಕೊಳವೆ ಬಾವಿಗಳು ಅದು ಖಾಸಗಿ ಇರಬಹುದು, ರೈತರದ್ದು